**ಕರ್ನಾಟಕ ಸರಕಾರ**

ನಂ:ಕಂಇ/ಭೂಸ್ವಾ-9(ಎ)/ಸಿಆರ್-05/2018-19 969

ಆಯುಕ್ತರವರ ಕಛೇರಿ,
ಪುಪು/ಭೂಸ್ವಾಧೀನ, ಕೃ.ಮೇ.ಯೋ,
ನವನಗರ, ಬಾಗಲಕೋಟೆ.
ದಿನಾಂಕ: 18-10-2019.

ಇವರಿಗೆ,

ವಿಶೇಷ ಭೂಸ್ವಾಧೀನಾಧಿಕಾರಿ,
ಕೃ.ಮೇ.ಯೋ, ಜಮಖಂಡಿ.

ಮಾನ್ಯರೇ,

ವಿಷಯ:- ಜಮಖಂಡಿ ತಾಲೂಕಿನ ನಾಗನೂರ ಗ್ರಾಮದ ಜಮೀನುಗಳು ಆಲಮಟ್ಟಿ ಜಲಾಶಯದ ಹಿನ್ನೀರಿನ ಪೂರ್ವ ಮಟ್ಟ ಎಫ್ ಆರ್ ಎಲ್ 519.6 ಮೀ, ರಿಂದ 524.256 ಮೀ ಹಿನ್ನೀರಿನಿಂದ ಮುಳುಗಡೆಯಾಗುವುದರಿಂದ ಜಮೀನುಗಳ ಭೂಸ್ವಾಧೀನಪಡಿಸಿಕೊಳ್ಳಲು ಕಲಂ 19(7)ರಡಿ ಕಾಲಾವಧಿಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ:- ತಮ್ಮ ಕಛೇರಿ ಪತ್ರ ಸಂ.ಎಲ್ಎಕ್ಯೂ/ಎಸ್ಆರ್-28/15-16/305, ದಿನಾಂಕ: 16-08-2019 (ಈ ಕಛೇರಿ ಸ್ವೀಕೃತಿ ದಿನಾಂಕ: 22-08-2019).

-000-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ನಾಗನೂರ ಗ್ರಾಮದ ಜಮೀನುಗಳು ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಪೂರ್ವ ಮಟ್ಟ ಎಫ್ ಆರ್ ಎಲ್ 519.6 ಮೀ, ರಿಂದ 524.256 ಮೀ ಹಿನ್ನೀರಿನಿಂದ ಮುಳುಗಡೆಯಾಗುವುದರಿಂದ ಜಮೀನುಗಳ ಭೂಸ್ವಾಧೀನಪಡಿಸಿಕೊಳ್ಳುವ ಕಾರ್ಯವು ಪ್ರಗತಿಯಲ್ಲಿದ್ದು, ಕಲಂ 11(1) ಅಧಿಸೂಚನೆ ದಿನಾಂಕ: 20-04-2018 ಇದ್ದು, ಆದರೆ ಆರ್.ಆರ್.ಎ.ಪಿ. ಕರಡು ಯಾದಿಯು ವಿಳಂಬವಾಗಿರುವದರಿಂದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಮುಂದುವರೆಯಲು ಕಲಂ 19(7)ರಡಿ ಅವಧಿ ವಿಸ್ತರಿಸಿ ಕಾಲಾವಕಾಶ ನೀಡಲು ಉಲ್ಲೇಖದನ್ವಯ ವಿನಂತಿಸಿದ್ದೀರಿ.

ತಮ್ಮ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಆದರೆ ಆರ್.ಆರ್.ಎ.ಪಿ. ಕರಡು ಯಾದಿಯು ವಿಳಂಬವಾಗಿರುವದರಿಂದ ಭೂಸ್ವಾಧೀನ ಪ್ರಕ್ರಿಯೇ ಮುಂದುವರೆಯಲು ಕಲಂ 19(7)ರ (2ನೇ ವಿವರಣೆ) ಅಡಿಯಲ್ಲಿ ಸದರಿ ಪ್ರಕರಣಗಳಲ್ಲಿ ಭೂಸ್ವಾಧೀನ ಕಾಯ್ದೆಯ ಪ್ರಕಾರ ಸಂಪೂರ್ಣ ಪ್ರಕ್ರಿಯೆ ಪೂರ್ಣಗೊಳಿಸಿ ಅಧಿಸೂಚನೆಯನ್ನು ಹೊರಡಿಸಲು ದಿನಾಂಕ: 31-12-2019 ರವರೆಗೆ ಅವಧಿ ವಿಸ್ತರಿಸಲಾಗಿದೆ. ಭೂಸ್ವಾಧೀನ ಕಾಯ್ದೆ ಕಲಂ 19(2)ರ (3ನೇ ವಿವರಣೆ) ರನ್ವಯ ಅಧಿಸೂಚನೆ ಹೊರಡಿಸಿ ಅಂತರ್ಜಾಲದಲ್ಲಿ ಅಪ್‌ಲೋಡ ಮಾಡಲು ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,

| |
|---|
| ಕಛೇರಿ ಟಿಪ್ಪಣಿ ಮಾನ್ಯ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ. |

18/10/19

**ಆಯುಕ್ತರು,**
**ಪುಪು/ಭೂಸ್ವಾಧೀನ, ಕೃ.ಮೇ.ಯೋ,**
**ನವನಗರ, ಬಾಗಲಕೋಟೆ.**
**ಇವರ ಪರವಾಗಿ**

**ಪ್ರತಿಯನ್ನು:**

1) ಪುನರವಸತಿ ಅಧಿಕಾರಿಗಳು, ಕೃಮೇಯೋ, ಜಮಖಂಡಿ ಇವರಿಗೆ ಮಾಹಿತಿಗಾಗಿ.
2) ಸಿಸ್ಟಂ ಮ್ಯಾನೇಜರ, ಕಂಪ್ಯೂಟರ ವಿಭಾಗ, ಮಹಾ ವ್ಯವಸ್ಥಾಪಕರವರ ಕಛೇರಿ, ಪುಪು, ಕೃಮೇಯೋ, ಬಾಗಲಕೋಟೆ ಇವರಿಗೆ ಮಾಹಿತಿಗಾಗಿ.